# ಕರ್ನಾಟಕ ಸರ್ಕಾರದ ನಡವಳಿಗಳು,

ವಿಷಯ:- ಶ್ರೀ ವಾಸುದೇವರಾವ್. ಎ.ಆರ್., ಸಹಾಯಕ ಕೃಷಿ ಅಧಿಕಾರಿ, ಇವರಿಗೆ ಸ್ವ-ಇಚ್ಛಾ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ

**ಓದಲಾಗಿದೆ:-**

[1] ಕೃಷಿ ಆಯುಕ್ತರ ಪತ್ರ ಸಂ. ಕೃಇಸಿ-1/ಸಕೃಅ-2/38/2010-11
ದಿನಾಂಕ: 24-12-2010

**ಪ್ರಸ್ತಾವನೆ:-**

ಕ್ರ.ಸಂ.[1]ರಲ್ಲಿ ಓದಲಾದ ದಿನಾಂಕ: 24-12-2010ರ ಪತ್ರದಲ್ಲಿ ಕೃಷಿ ಆಯುಕ್ತರು ಶ್ರೀ ವಾಸುದೇವ್‌ರಾವ್. ಎ.ಆರ್. ಸಹಾಯಕ ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಶಿಕಾರಿಪುರ ಶಿವಮೊಗ್ಗ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರು ತಮ್ಮ ವೈಯಕ್ತಿಕ ಕಾರಣದ ಮೇಲೆ, ದಿನಾಂಕ: 31-12-2010ರಿಂದ ಸ್ವಯಂ ನಿವೃತ್ತಿ ಹೊಂದಲು ಕೋರಿಕೊಂಡಿರುತ್ತಾರೆಂದು, ತಿಳಿಸಿ, ಇವರ ವಿರುದ್ಧ ಇಲಾಖಾ ಹಂತದಲ್ಲಿ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲವೆಂದು, ಹಿಂದೆ ಸೇವೆ ಸಲ್ಲಿಸಿದ ಕಚೇರಿಗಳಲ್ಲಿಯೂ ಸಹ ಯಾವುದೇ ರೀತಿಯ ಹಣ ಸರ್ಕಾರಕ್ಕೆ ಬಾಕಿ ಇರುವುದಿಲ್ಲವೆಂದು, ಕೃಷಿ ಆಯುಕ್ತರು, ವರದಿ ಮಾಡಿರುತ್ತಾರೆ. ಒಂದು ವೇಳೆ ಇವರಿಂದ ಸರ್ಕಾರಕ್ಕೆ ಏನಾದರೂ ಬಾಕಿ ಬರಬೇಕಾದಲ್ಲಿ, ಅವರಿಗೆ ಬರಬೇಕಾದ ನಿವೃತ್ತಿ ಉಪಲಬ್ಧಗಳಿಂದ ವಸೂಲು ಮಾಡಬಹುದೆಂದು ಅಧಿಕಾರಿಯವರು, ಮುಚ್ಚಳಿಕೆ ಬರೆದುಕೊಟ್ಟಿರುವುದರಿಂದ ಶ್ರೀ. ವಾಸುದೇವ್‌ರಾವ್. ಎ.ಆರ್. ಸಹಾಯಕ ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಶಿಕಾರಿಪುರ ಶಿವಮೊಗ್ಗ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 285(1)(ಎ)ರ ಪ್ರಕಾರ ದಿನಾಂಕ: 31-12-2010ರ ಅಪರಾಹ್ನದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಸ್ವ-ಇಚ್ಛಾ ನಿವೃತ್ತಿ ಹೊಂದಲು ಅನುಮತಿ ನೀಡಬೇಕೆಂದು ಕೃಷಿ ಆಯುಕ್ತರು ಪ್ರಸ್ತಾವಿಸಿರುತ್ತಾರೆ.

ಅದರಂತೆ ಕೃಷಿ ಆಯುಕ್ತರ ಪ್ರಸ್ತಾವನೆಯನ್ನು ಒಪ್ಪಿ, ವಾಸುದೇವ್‌ರಾವ್.ಎ.ಆರ್., ಸಹಾಯಕ ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಶಿಕಾರಿಪುರ ಶಿವಮೊಗ್ಗ ಜಿಲ್ಲೆ ಇವರಿಗೆ, ದಿನಾಂಕ: 28-02-2011ರ ಅಪರಾಹ್ನದಿಂದ ಜಾರಿಗೆ ಬರುವಂತೆ ಸ್ವ-ಇಚ್ಛಾ ನಿವೃತ್ತಿ ಹೊಂದಲು ಅನುಮತಿ ನೀಡಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಕೃತೋಇ 08 ಕೃಪಸೇ 2011

## ಬೆಂಗಳೂರು, ದಿನಾಂಕ: 24ನೇ ಫೆಬ್ರವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ. ವಾಸುದೇವರಾವ್.ಎ.ಆರ್. ಸಹಾಯಕ ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಶಿಕಾರಿಪುರ ಶಿವಮೊಗ್ಗ ಜಿಲ್ಲೆ ಇವರಿಂದ

ಸರ್ಕಾರಕ್ಕೇನಾದರೂ ಬರಬೇಕಾದ ಬಾಕಿ ಇದ್ದಲ್ಲಿ, ಅದನ್ನು ಅವರಿಗೆ ಬರುವ ನಿವೃತ್ತಿ ಉಪಲಬ್ದದಿಂದ ಕಟಾಯಿಸುವ ಷರತ್ತಿನೊಂದಿಗೆ, ದಿನಾಂಕ: **28-02-2011** ಅಪರಾಹ್ನದಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 285(1)(ಎ) ರ ಪ್ರಕಾರ ಸರ್ಕಾರಿ ಸೇವೆಯಿಂದ ಸ್ವ-ಇಚ್ಛಾ ನಿವೃತ್ತಿ ಹೊಂದಲು, ಅನುಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

24/2/11
[ಜಿ.ಕೆ. ಗುರಾಣಿ]
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

24/2/11

ಇವರಿಗೆ:-

1] ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
**2] ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು[ ಮೂಲ ಸೇವಾ ಪುಸ್ತಕದೊಂದಿಗೆ, [ರಿಜಿಸ್ಟರ ಅಂಚೆ ಮೂಲಕ]**
3] ಜಂಟಿ ಕೃಷಿ ನಿರ್ದೇಶಕರು, ಶಿವಮೊಗ್ಗ ಜಿಲ್ಲೆ ಶಿವಮೊಗ್ಗ
4] ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ,ಬೆಂಗಳೂರು.
5] ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ.
6] ಸಹಾಯಕ ಕೃಷಿ ನಿರ್ದೇಶಕರು, ಶಿಕಾರಿಪುರ ಶಿವಮೊಗ್ಗ ಜಿಲ್ಲೆ
7] ಸಂಬಂಧಪಟ್ಟ ಅಧಿಕಾರಿ[ ಕೃಷಿ ಆಯುಕ್ತರ ಮೂಲಕ]
8] ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.